ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 13/3/21

ಮಾಜಿ ಸಚಿವರ ವಿರುದ್ಧ ಲೈಂಗಿಕ ಹಗರಣ ಆರೋಪ । ಇಂದು ಅಥವಾ ನಾಳೆ ತಂಡ ರಚನೆ ಸಾಧ್ಯತೆ । ಅಧಿಕಾರಿಗಳ ಮಾಹಿತಿ

# ಎಫ್‌ಐಆರ್ ಇಲ್ಲದೆ ವಿಚಾರಣೆ ನಡೆಸಲಿದೆ ಎಸ್‌ಐಟಿ

13-3-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮಾಜಿ ಸಚಿವರ ಲೈಂಗಿಕ ವಿವಾದ ಸಂಬಂಧ ತನಿಖೆಗೆ ಗೃಹ ಇಲಾಖೆ ನೇಮಿಸಿರುವ ಹೆಚ್ಚುವರಿ ಪೊಲೀಸ್ ಆಯುಕ್ತ ಸೌಮೇಂದು ಮುಖರ್ಜಿ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ) ಕೇವಲ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಒಪ್ಪಿಸಲಿದೆ. ಆನಂತರ ಎಫ್‌ಐಆರ್ ದಾಖಲಿಸಬೇಕೆ ಬೇಡವೇ ಎಂಬುದರ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. 2 ದಿನಗಳಲ್ಲಿ ಎಸ್‌ಐಟಿ ತಂಡ ರಚನೆ ಆಗಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.



ಸೌಮೇಂದು ಮುಖರ್ಜಿ

ಮಾಜಿ ಸಚಿವರ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪದಡಿ ನೀಡಿದ್ದ ದೂರನ್ನು ಹಿಂಪಡೆಯಲಾಗಿದೆ. ಇದೀಗ ಅಶ್ಲೀಲ ವಿಡಿಯೋ ಬಿಡುಗಡೆ ಹಿಂದಿನ ಷಡ್ಯಂತ್ರ ರೂಪಿಸಿದವರು ಯಾರೆಂದು ವಿವರವಾಗಿ ವಿಚಾರಣೆ ನಡೆಸಿ ಮಾಹಿತಿ ಕಲೆಹಾಕಲಿದೆ. ಆದರೆ, ಬಂಧಿಸುವ ಅಧಿಕಾರ ಇರುವುದಿಲ್ಲ. ಇದು ಘಟನೆ ಕುರಿತು ಮಾಜಿ ಸಚಿವರು ಸೇರಿ ಪ್ರಕರಣಕ್ಕೆ ಸಂಬಂಧಿಸಿದವರ ಹೇಳಿಕೆ ಮತ್ತು ಸಾಕ್ಷ್ಯ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿರುತ್ತದೆ. ವಿಚಾರಣೆ ಪೂರ್ಣಗೊಳಿಸಿದ ಬಳಿಕ ತನಿಖೆ ನಡೆಸುವಂತೆ ಸರ್ಕಾರಕ್ಕೆ ಎಸ್‌ಐಟಿ ಶಿಫಾರಸು ಮಾಡಲಿದೆ. ಆನಂತರ ಎಫ್‌ಐಆರ್ ದಾಖಲಿಸಿ ತನಿಖೆ ನಡೆಯಲಿದೆ.

ಗೃಹ ಸಚಿವರ ಆದೇಶದಲ್ಲಿ ವಿಚಾರಣೆ ಬದಲಿಗೆ ತನಿಖೆ ಎಂದು ಉಲ್ಲೇಖವಾಗಿದ್ದರೆ ಪೊಲೀಸರು, ವಿವಾದ ಸಂಬಂಧ ಎಫ್‌ಐಆರ್ ದಾಖಲಿಸಬೇಕಿತ್ತು. ಮಾಜಿ ಸಚಿವ ಅಥವಾ ವಿಡಿಯೋದಲ್ಲಿ ಪ್ರಸ್ತಾಪವಾಗಿರುವ ಯುವತಿ ದೂರು ನೀಡದೆ ಹೋಗಿದ್ದರೂ ಇತ್ತೀಚಿನ ಘಟನಾವಳಿ ಆಧರಿಸಿ ಅನಾಮಧೇಯ ವ್ಯಕ್ತಿಗಳ ವಿರುದ್ಧ ಸ್ವಯಂ ಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಬೇಕಿತ್ತು. ಬಳಿಕ ಕೋರ್ಟ್‌ಗೆ ಆರೋಪ ಪಟ್ಟಿ ಅಥವಾ ಪ್ರಕರಣದಲ್ಲಿ ಹುರುಳಿಲ್ಲದೆ ಹೋದರೆ ಬಿ ರಿಪೋರ್ಟ್ ಸಲ್ಲಿಸಬಹುದು. ಎಫ್‌ಐಆರ್ ದಾಖಲಾದರೆ ತನಿಖೆಗೆ ಗಂಭೀರತೆ ಇರುತ್ತದೆ. ತಪ್ಪಿತಸ್ಥರನ್ನು ಬಂಧಿಸುವ ಅಧಿಕಾರ ಎಸ್‌ಐಟಿ ಹೊಂದಿರುತ್ತದೆ. ಈ ಹಿಂದೆ ಮಾಜಿ ಸಚಿವ ಎಚ್.ವೈ.ಮೇಟಿ ವಿರುದ್ಧ ಆರೋಪ ಕೇಳಿ ಬಂದಾಗಲೂ ಲೈಂಗಿಕ ಹಗರಣದ ಸಿಐಡಿ ವಿಚಾರಣೆಗೆ ಅಂದಿನ ಸರ್ಕಾರ ಆದೇಶಿಸಿತ್ತು. ಆಗ ಯಾರ ವಿರುದ್ಧವೂ ಪ್ರಕರಣ ದಾಖಲಾಗಲಿಲ್ಲ. ಕೊನೆಗೆ ಮೂಲ ವಿಡಿಯೋ ಪತ್ತೆಯಾಗಿಲ್ಲ. ಇದು ನಕಲಿಯೋ ಅಥವಾ ಅಸಲಿಯೋ ಎಂಬುದು ನಿಗೂಢವಾಗಿದೆ ಎಂದು ವರದಿ ಒಪ್ಪಿಸಿದರು. ಇದೀಗ ಮಾಜಿ ಸಚಿವರ ಲೈಂಗಿಕ ಹಗರಣವೂ ಅದೇ ಹಾದಿಯಲ್ಲಿ ಸಾಗಲಿದೆ ಎನ್ನಲಾಗುತ್ತಿದೆ.

**ಎಫ್‌ಐಆರ್ ಮಾಡಿದರೆ ಏನಾಗುತ್ತೆ:** ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡರೆ ತನಿಖೆಯನ್ನು ಕೋರ್ಟ್ ಗಮನಿಸುತ್ತದೆ. ವಿಡಿಯೋ ನಕಲಿಯೋ ಅಸಲಿಯೋ ಎಂಬುದನ್ನು ಸಂತ್ರಸ್ತೆ ಮತ್ತು ಮಾಜಿ ಸಚಿವರು ನಿರಾಕರಿಸಬೇಕು. ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ವರದಿ ಬರಬೇಕು. ಇಲ್ಲಿ ಸಂತ್ರಸ್ತೆ ಹೇಳಿಕೆ ಮುಖ್ಯವಾಗಿರುತ್ತೆ. ಆಕೆ ಕೊಡುವ ಹೇಳಿಕೆ ಮೇಲೆಯೇ ತನಿಖೆ ನಿಂತಿರುತ್ತೆ.

## ಎಸ್‌ಐಟಿ ತನಿಖೆ ಹಾದಿ

**ಎಸ್‌ಐಟಿ ತಂಡ ಆರಂಭದಲ್ಲಿ ದೂರು ನೀಡಿದ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಹೇಳಿಕೆ ಪಡೆದು ಆತನಿಗೆ ಸಿಡಿ ಮತ್ತು ಮಾಹಿತಿ ಕೊಟ್ಟವರನ್ನು ಮಾಹಿತಿ ಪಡೆಯಲಿದೆ. ಸಂತ್ರಸ್ತೆ ಮತ್ತು ಆಕೆ ಸಂಬಂಧಿಕರನ್ನು ಪತ್ತೆ ಮಾಡಿ ಹೇಳಿಕೆ ಪಡೆದು ಪೂರಕ ಸಾಕ್ಷ್ಯ ಸಂಗ್ರಹಿಸುತ್ತದೆ. ಸೆಕ್ಸ್ ಸಿಡಿಯ ಮೂಲ ಪತ್ತೆಹಚ್ಚಲಿದೆ. ಈ ವೇಳೆ ಯಾರೆಲ್ಲ ಷಡ್ಯಂತ್ರ ನಡೆಸಿದ್ದರೂ ಅವರಿಗೆ ಯಾರೆಲ್ಲ ಬೆಂಬಲ ಮತ್ತು ಹಣ ಪೂರೈಕೆ ಮಾಡಿದ್ದರೂ ಎಂಬುದನ್ನು ವಿಚಾರಣೆ ನಡೆಸಿ ವರದಿ ನೀಡಲಿದೆ.**



**ಎಲ್ಲೆಡೆ ಸದ್ದು ಮಾಡಿರುವ ಸಿಡಿ ಪ್ರಕರಣವನ್ನು ಸರ್ಕಾರ ಎಸ್ ಐಟಿ ತನಿಖೆಗೆ ವಹಿಸಿರುವುದು ತಿಪ್ಪೆ ಸಾರಿಸುವ ಕ್ರಮವಾಗಿದೆ. ಇಂತಹ ತನಿಖಾ ಸಂಸ್ಥೆಗಳಿಂದ ಸ್ವಾತಂತ್ರ್ಯ ಬಂದಾಗಿನಿಂದ ಯಾರಿಗೆ ಶಿಕ್ಷೆಯಾಗಿದೆ ಹೇಳಿ? ಹಾಗೇನಾದರೂ ಶಿಕ್ಷೆಯಾಗಿದ್ದರೆ ಅದು ಅಮಾಯಕರಿಗೆ ಮಾತ್ರ.**

| ಎಚ್.ಡಿ.ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿ



**ಸಿ.ಡಿ ವಿಚಾರದಲ್ಲಿ ನನಗೆ ಕಾಂಗ್ರೆಸ್ ಮೇಲೆ ಅನುಮಾನ ಬರುತ್ತಿದೆ. ಕಾಂಗ್ರೆಸ್ ಬಿಟ್ಟು ಬಂದು ನಮ್ಮ ಸರ್ಕಾರ ರಚನೆಗೆ ಕಾರಣರಾದ ಎಲ್ಲ ಶಾಸಕರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಇದೊಂದು ರಾಜಕೀಯ ಷಡ್ಯಂತ್ರ ಎನ್ನುವ ಸಂದರ್ಭವಿದೆ. ಹೀಗಾಗಿ ಸರ್ಕಾರವು ಎಸ್‌ಐಟಿ ರಚನೆ ಮಾಡಿದ್ದು, ಶೀಘ್ರವೇ ವರದಿ ಕೊಡಲಿದೆ.**

| ಶ್ರೀರಾಮುಲು ಸಮಾಜ ಕಲ್ಯಾಣ ಸಚಿವ

## ಅಗತ್ಯಬಿದ್ದರೆ ಎಫ್‌ಐಆರ್

**ಬೆಂಗಳೂರು:** ಅಶ್ಲೀಲ ಸಿಡಿ ಪ್ರಕರಣದ ತನಿಖೆಯ ಜವಾಬ್ದಾರಿ ಹೊತ್ತಿರುವ ವಿಶೇಷ ತನಿಖಾ ತಂಡವು ಅಗತ್ಯಬಿದ್ದರೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿಕೊಳ್ಳಲಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳುವ ಮೂಲಕ ಈ ಕುರಿತು ಗೊಂದಲಗಳಿಗೆ ತೆರೆ ಎಳೆದರು. ನಗರದಲ್ಲಿ ಮಾತನಾಡಿದ ಅವರು, ಪ್ರಾಥಮಿಕ ಹಂತದ ತನಿಖೆಯಲ್ಲಿ ಲಭ್ಯ ಪುರಾವೆ, ಇನ್ನಿತರ ಮಾಹಿತಿ ಆಧರಿಸಿ ಸಿದ್ಧಪಡಿಸಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದ್ದು, ಆವಶ್ಯಕ ಎನಿಸಿದರೆ ಎಫ್‌ಐಆರ್ ದಾಖಲಿಸಿಕೊಂಡು ಮತ್ತೊಂದು ಹಂತದ ತನಿಖೆ ನಡೆಸಲಿದೆ ಎಂದರು.



**ದೂರಿನ ವಿಚಾರ ಗೊತ್ತಿಲ್ಲ:** ಮಾಜಿ ಸಚಿವ ರಮೇಶ್ ಜಾರಕಿಹೊಳಿ ದೂರು ಸಲ್ಲಿಸುವ ವಿಚಾರ ಗೊತ್ತಿಲ್ಲ. ಸಿಡಿಯಿಂದಾಗಿ ತಮ್ಮ ತೇಜೋವಧೆ, ಮಾನಹಾನಿಯಾಗಿದೆ. ಷಡ್ಯಂತ್ರವಿರುವುದು ಸ್ಪಷ್ಟವಾಗಿದೆ ಎಂದು ಅವರು ಪತ್ರ ಬರೆದು ಮಾಡಿಕೊಂಡ ಮನವಿ ಮೇರೆಗೆ ಎಸ್‌ಐಟಿ ನೇಮಿಸಲಾಗಿದೆ ಎಂದು ಬೊಮ್ಮಾಯಿ ಸ್ಪಷ್ಟಪಡಿಸಿದರು.

**ಡಿಕೆಶಿಗೂ ಕುಟುಕು:** ನಕಲಿ ಸಿಡಿ ಎಂದ ಮೇಲೆ ತನಿಖೆಯ ಔಚಿತ್ಯ ವೇನು? ಎಂದು ಪ್ರಶ್ನಿಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಕುಟುಕಿದ ಬೊಮ್ಮಾಯಿ ಸಿಡಿ ನಕಲಿಯೇ ಎಂದಾದರೂ ಮಾಡಿದ್ಯಾರಂತ ಗೊತ್ತಾಗಬೇಕಲ್ಲ. ಏನಿದೆ ಮಸಲತ್ತು ತಿಳಿಯ ಬೇಕಲ್ಲ. ಅದಕ್ಕಾಗಿಯೇ ಎಸ್‌ಐಟಿ ರಚಿಸಿದ್ದೇವೆ ಎಂದರು.